## ಜಲತರಂಗ!

ಒಬ್ಬ ಸೃಜನಶೀಲ ಓದುಗನಿಗೆ ಉತ್ತಮ ಸಾಹಿತ್ಯ ಕೃತಿಯೊಂದು ಹೇಗೆ ಖುಷಿ ಕೊಡುತ್ತದೋ, ಹಾಗೆಯೇ ಒಬ್ಬ ಸಂಗೀತ ಪ್ರೇಮಿಗೆ ಇಂಪಾದ ಸಂಗೀತ ಮನೋಲ್ಲಾಸವನ್ನು ನೀಡುತ್ತದೆ.

ಹಲವು ವರ್ಷಗಳ ಹಿಂದೆ ಬಳಸುತ್ತಿದ್ದ ಸಂಗೀತ ಉಪಕರಣಗಳಲ್ಲಿ 'ಜಲತರಂಗ' ವಿಭಿನ್ನ ವಾದ್ಯ. ಹಳೆಯ ಹಿಂದಿ ಸಿನಿಮಾದ ಹಾಡಿನಲ್ಲಿ ಜಲತರಂಗ ವಾದ್ಯದ ನಾದ ಕೇಳಲು ಆಪ್ಯಾಯಮಾನ ಅನಿಸುತ್ತಿತ್ತು. ಕಡಿಮೆ ಖರ್ಚಿನ ಈ ವಾದ್ಯವನ್ನು ಇತ್ತೀಚಿನ ಸಿನಿಮಾಗಳಲ್ಲಿ ಏಕೆ ಬಳಸುತ್ತಿಲ್ಲವೋ ಗೊತ್ತಿಲ್ಲ. ಈಚೆಗೆ ಆಕಸ್ಮಿಕವಾಗಿ ಚಂದನ ವಾಹಿನಿಯಲ್ಲಿ ಕರ್ನಾಟಕ ಸಂಗೀತದ ಜಲತರಂಗ ವಾದನವನ್ನು ಕೇಳುವ ಅದೃಷ್ಟ ನನಗೆ ಲಭಿಸಿತು.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

## ಅಭಿರುಚಿ ಭಿನ್ನ

ಧಾರಾವಾಹಿ ನೋಡುವ ವೀಕ್ಷಕರು ಅದನ್ನು ಸಮಗ್ರವಾಗಿ ಇಷ್ಟಪಡುತ್ತಾರೆ ಎಂದು ಹೇಳಲು ಸಾಧ್ಯವಿಲ್ಲ. 'ಲೋಕೋ ಭಿನ್ನ ರುಚಿಃ' ಎನ್ನುವಂತೆ ಒಬ್ಬೊಬ್ಬರಿಗೆ ಒಂದೊಂದು ಇಷ್ಟವಾಗುತ್ತದೆ. ಕಥೆ, ಸಂಭಾಷಣೆ, ಅಭಿನಯ, ಮೇಕಪ್, ಫ್ಯಾಷನ್ ಹೀಗೆ ಯಾವುದೋ ಒಂದು ಕಾರಣಕ್ಕೆ ನೋಡುತ್ತಾರೆ. ಕೆಲವು ಧಾರಾವಾಹಿಯನ್ನು ಸರ್ಕಾರಿ ಕಚೇರಿ ಮತ್ತು ನ್ಯಾಯಾಲಯದ ಕಾರ್ಯಕಲಾಪಗಳನ್ನು ತಿಳಿಯುವ ಕುತೂಹಲದಿಂದಲೇ ನೋಡುತ್ತಾರೆ.

ಕಲರ್ಸ್ ಕನ್ನಡದ 'ಕನ್ನಡತಿ'ಯಲ್ಲಿ ವಾರಗಿತ್ತಿಯರ, ಅತ್ತೆ–ಸೊಸೆಯರ, ಗಂಡ– ಹೆಂಡತಿ, ಬಾಸ್– ಸೆಕ್ರೆಟರಿ ಜಗಳ, ಕೊಂಕು ಮಾತಿನಲ್ಲಿ ತಿವಿಯುವ, ನಿಗೂಢಾರ್ಥದ ಸಂಭಾಷಣೆ ಕೆಲ ವೀಕ್ಷಕರ ಮೆಚ್ಚುಗೆಯನ್ನು ಪಡೆಯುತ್ತದೆ ಎಂದು ಅನಿಸುತ್ತದೆ.

—ರಮಾನಂದ ಶರ್ಮಾ, ಬೆಂಗಳೂರು

## ದಿಗ್ಗಜರ ಅಪರೂಪದ ಸಂಗಮ

ಕಲರ್ಸ್ ಕನ್ನಡದ 'ರಾಮಾಚಾರಿ' ಹಲವು ವಿಶೇಷಗಳ ವಿಭಿನ್ನ ಪ್ರಯತ್ನ. ರಾಮಾಚಾರಿ ಅಂದ ಕೂಡಲೇ ಥಟ್ ಅಂತ ಚಾಮಯ್ಯ ಮೇಷ್ಟ್ರು ಮತ್ತು ಕೆ.ಎಸ್. ಅಶ್ವತ್ಥ್ ಪಾತ್ರ ಜ್ಞಾಪಕ ಬರುತ್ತದೆ. ಇಲ್ಲಿ, ಅವರ ಮಗ ಶಂಕರ್ ಅಶ್ವತ್ಥ್ ಕಥಾನಾಯಕ ರಾಮಾಚಾರಿಯ ತಂದೆಯ ಪಾತ್ರ ಮಾಡುತ್ತಿದ್ದಾರೆ. ಕಥೆಗೆ ಹೇಳಿ ಮಾಡಿಸಿದ ಜೋಡಿ ಇದು. ಕೆಲವೊಮ್ಮೆ ಅಶ್ವತ್ಥ್ ಅವರೇ ತೆರೆಯ ಮೇಲೆ ಬಂದರೇನೋ ಅನ್ನುವಷ್ಟರ ಮಟ್ಟಿಗೆ ಶಂಕರ್ ಪ್ರಬುದ್ಧವಾಗಿ ನಟಿಸಿದ್ದಾರೆ. ಬಹಳಷ್ಟು ಸಿನಿಮಾಗಳಲ್ಲಿ ಪ್ರಸಿದ್ಧಿ ಪಡೆದಿದ್ದ ನಟಿ ಭಾವನಾ, ಚಿ. ಗುರುದತ್, ಬಾಲರಾಜ್, ಅಂಜಲಿ, ಸಿರಿಜಾ ಇಲ್ಲಿ ಕಾಣಿಸಿಕೊಂಡಿದ್ದಾರೆ. ಮೇಲುಕೋಟೆ ದೇವಸ್ಥಾನದ ಪರಿಸರ, ಬೆಂಗಳೂರಿನ ಭವ್ಯ ಕಟ್ಟಡಗಳ ಹೈಟೆಕ್ ಸ್ಪರ್ಶದ ಜಾಣ್ಮೆಯನ್ನು ಮೆಚ್ಚಲೇಬೇಕು.

—ಆರ್. ವೀರೇಶ್ ಕುಮಾರ್, ಬೆಂಗಳೂರು

ವಾರದ ಪತ್ರ

## ನಿಜವಾದ ಸೂಪರ್ ಸ್ಟಾರ್ ಯಾರು?

ಸುವರ್ಣ 'ಸೂಪರ್ ಸ್ಟಾರ್' ನಿಜವಾಗಿಯೂ ಸೂಪರ್. ಆದರೆ ಕೆಲವು ಸನ್ನಿವೇಶಗಳು ನಮ್ಮನ್ನು ಗೊಂದಲಕ್ಕೀಡುಮಾಡುತ್ತಿವೆ. ಶಾಲಿನಿ ನಿಮ್ಮ ಜೀವನದ ಸೂಪರ್ ಸ್ಟಾರ್ ಯಾರು? ಎಂದು ಕೇಳುವ ಪ್ರಶ್ನೆಗೆ ಬಹುತೇಕ ಎಲ್ಲರ ಉತ್ತರ ಒಂದೇ. ನಮ್ಮ ತಂದೆ–ತಾಯಿ, ಗಂಡ ಮತ್ತು ಮನೆಯವರು.

ಹೆತ್ತವರು ತಮ್ಮ ಮಕ್ಕಳನ್ನು ಬೆಳೆಸಲು ಕಷ್ಟಪಡುತ್ತಾರೆ. ಮಕ್ಕಳು ಏನೇ ಕೇಳಿದರೂ ಅವರ ಆಸೆ ಪೂರೈಸುತ್ತಾರೆ ಎಂದೇ ಹೇಳುತ್ತಾರೆ. ಪೋಷಕರೆಲ್ಲ ತಮ್ಮ ಮಕ್ಕಳ ಏಳಿಗೆಗೆ ಒಪ್ಪತ್ತು ಉಂಡು ಯಾವ ತ್ಯಾಗಕ್ಕೂ ಸಿದ್ಧರಿರುತ್ತಾರೆ ನಿಜ. ಆದರೆ, ತಮ್ಮ ಮಕ್ಕಳನ್ನು ಹೊರತು ಇತರರಿಗೆ ಸಹಾಯ ಮಾಡಿದ್ದರೆ ಆಗ ಅವರು ನಿಜವಾಗಿಯೂ ಸೂಪರ್ ಸ್ಟಾರ್.

ಮತ್ತೊಂದು ತಮಾಷೆಯೆಂದರೆ ಒಬ್ಬಳು ಸ್ಪರ್ಧಿ ಇತ್ತೀಚೆಗೆ ಕಳೆದುಕೊಂಡ ತನ್ನ ತಾಯಿಯನ್ನು ನೆನೆಸಿಕೊಂಡು ಬಿಕ್ಕಿ ಬಿಕ್ಕಿ ಅತ್ತಳು. ನನಗೆ ನನ್ನ ಅಮ್ಮ ಬೇಕು ಮೇಡಂ ಎಂದು ರೋದಿಸುವುದನ್ನು ನೋಡಿ ನಮ್ಮ ಕಣ್ಣಂಚು ಒದ್ದೆಯಾಯಿತು. ಆದರೆ ಇನ್ನೊಂದು ಕ್ಷಣದಲ್ಲಿ ಅವಳು ಮಾಡಿದ ನೃತ್ಯ ನೋಡಿ ಇಷ್ಟೊತ್ತೂ ಅಮ್ಮನಿಗಾಗಿ ಹಂಬಲಿಸಿದಾಕೆ ಇವಳೇನಾ ಎಂದೆನಿಸಿತು?

—ಪುಷ್ಪಾ ಎನ್.ಕೆ. ರಾವ್, ಉಡುಪಿ

## ಹಾಡಿನ ಕೊಡಿಗೆ

ಝೀ ಕನ್ನಡದ 'ಸರಿಗಮಪ' ಕಳೆದ ವಾರದ ಸಂಚಿಕೆ ವಿಶೇಷವಾಗಿತ್ತು. ಸ್ಪರ್ಧಿಗಳು ತಮ್ಮ ಹಾಡನ್ನು ಅರ್ಪಣೆ ಮಾಡುವ ಅವಕಾಶ ಇಲ್ಲಿತ್ತು. ಕಂಬದರಂಗಯ್ಯ ತಮ್ಮ ಹಾಡನ್ನು ವಾದ್ಯವೃಂದಕ್ಕೆ ಅರ್ಪಣೆ ಮಾಡಿದರು.

ಅವರು ಪಟ್ಟ ಶ್ರಮವನ್ನು ತಿಳಿದು ಆತನಿಗೆ ಮುಂದೆ ಯಶಸ್ಸು, ಕೀರ್ತಿ ಸಿಗಲಿ ಎಂದು ಮನ ಹಾರೈಸಿತು. ಜ್ಞಾನೇಶ ಎಂಬ ಸ್ಪರ್ಧಿ ತನ್ನ ತಾಯಿಗಾಗಿ ಹಾಡಿದ ಹಾಡು ಅಮ್ಮನ ನೆನಪನ್ನು ತರಿಸಿತು. ಸಾಧ್ವಿನಿ ಕೊಪ್ಪ, ಸಿ. ಅಶ್ವತ್ಥ್ ಅವರಿಗೆ 'ಶ್ರಾವಣ ಬಂತು... ನಾಡಿಗೆ...' ಅರ್ಪಿಸಿದರು. ವಿಶೇಷ ಅತಿಥಿ ಸಂಗೀತಾ ಕಟ್ಟಿ ಈ ಹಾಡಿನ ಬಗ್ಗೆ ವ್ಯಕ್ತಪಡಿಸಿದ ಮೆಚ್ಚುಗೆ ಮುದನೀಡಿತು.

—ಕೆ.ಎಸ್. ಸವಿತ, ಬೆಂಗಳೂರು

## ಜನಪ್ರಿಯ ವಾಲ್ಮೀಕಿ ರಾಮಾಯಣ

ಫೆ. 17ನೇ ಸಂಚಿಕೆಯ 'ಜಾಣರಪೆಟ್ಟಿಗೆ'ಯಲ್ಲಿ 'ಶ್ರೀರಾಮಾಯಣ ದರ್ಶನಂ' ಮಾತ್ರ ಕುವೆಂಪು ಬರೆದಿದ್ದಾರೆ ಎನ್ನುವ ಅರ್ಥದಲ್ಲಿ ಬರೆಯಲಾಗಿದೆ. 'ಜನಪ್ರಿಯ ವಾಲ್ಮೀಕಿ ರಾಮಾಯಣ' ಕೂಡ ಅವರಿಂದ ರಚನೆಯಾಗಿದೆ. ಹಾಗಾಗಿ 'ಬೆಟ್ಟದ ಹೂವು' ಸಿನಿಮಾದಲ್ಲಿ ತೋರಿಸಿದ ಪುಸ್ತಕ ಸರಿಯಾಗಿದೆ.

—ಸಚಿನ್ ಸಿ.ಆರ್., ಕೆ.ಆರ್ ನಗರ

## ರಾಮಾಚಾರಿ ಅಲ್ಲ ರಾಮಾಚಾರ್!

ಕಲರ್ಸ್ ಕನ್ನಡದಲ್ಲಿ ಹೊಸ ಧಾರಾವಾಹಿ 'ರಾಮಾಚಾರಿ' ಆರಂಭವಾಗಿದೆ. ಪುರೋಹಿತರ ಪುತ್ರ ರಾಮಾಚಾರಿ ನಾಯಕ. ಆತನ ಹೆಸರು ರಾಮಾಚಾರಿ ಬದಲು ರಾಮಾಚಾರ್ ಅಥವಾ ರಾಮಾಚಾರ್ಯ ಎಂದಿರಬೇಕಿತ್ತು. ರಾಮಾಚಾರಿ ಎಂದರೆ ವಿಶ್ವಕರ್ಮ ಸಮುದಾಯಕ್ಕೆ ಸೇರಿದವನು. ರಾಮಾಚಾರ್ ಅಥವಾ ರಾಮಾಚಾರ್ಯ ಎಂದರೆ ಪುರೋಹಿತ ಅಥವಾ ಅರ್ಚಕ ವರ್ಗಕ್ಕೆ ಸೇರಿದವನಾಗುತ್ತಾನೆ ಅಲ್ಲವೇ?

—ಪಿ.ಜೆ. ರಾಘವೇಂದ್ರ, ಮೈಸೂರು

## ಕತೆ ಮುಗಿಸಿ

ಕಲರ್ಸ್ ಕನ್ನಡದ 'ಮಂಗಳ ಗೌರಿ ಮದುವೆ' ಮುಗಿಯುವಂತೆ ಕಾಣುತ್ತಿಲ್ಲ. ಗೌರಿಗೆ ಇನ್ನೂ ಯಾವ ವೇಷ ಹಾಕಬೇಕೆಂದಿದ್ದಾರೆ? 'ಸೀತಾರಾಮು' ಸಿನಿಮಾದಲ್ಲಿ ಮಂಜುಳಾ ಹೊಡೆದಾಡಿದಂತೆ ಹೊಡೆದಾಡುತ್ತಾರೆ. ಅದು ತಾನು ಗರ್ಭಿಣಿ, ಬಾಡಿಗೆ ತಾಯಿ ಎಂಬುದನ್ನು ಮರೆತು. ಬೇಗ ಕತೆ ಮುಗಿಸಿ ಇಲ್ಲ ಕತೆಯನ್ನಾದರೂ ಬದಲಾಯಿಸಿ ಪುಣ್ಯ ಕಟ್ಟಿಕೊಳ್ಳಿ.

—ಎಂ.ಟಿ. ರಮಾನಂದ ರೆಡ್ಡಿ, ಮದಕರಿಪುರ

## ಮೂರನೆಯವರಿಗೂ ಅವಕಾಶ ಸಿಗಲಿ

ಚಂದನ ವಾಹಿನಿಯಲ್ಲಿ ಪ್ರಸಾರವಾಗುವ 'ಥಟ್ ಅಂತ ಹೇಳಿ' ಕಾರ್ಯಕ್ರಮಕ್ಕೆ ಈ ಹಿಂದೆ 'ಜಾಣರ ಪೆಟ್ಟಿಗೆ'ಯಲ್ಲಿ ಬಝರ್ ಒತ್ತಿದ ಮೂರನೇ ಸ್ಪರ್ಧಿಗೂ ಉತ್ತರ ನೀಡುವ ಅವಕಾಶವನ್ನು ಕಲ್ಪಿಸಬೇಕು ಎಂದು ವೀಕ್ಷಕರೊಬ್ಬರು ಮನವಿಯನ್ನು ಮಾಡಿದ್ದರು.

ದಯಮಾಡಿ ಬಝರ್ ಒತ್ತಿದ ಮೂವರಿಗೂ ಉತ್ತರವನ್ನು ನೀಡುವ ಸಮಾನ ಅವಕಾಶವನ್ನು ಕಲ್ಪಿಸಿಕೊಡಿ ಎಂದು ಈಗಲೂ ಆ ಕಾರ್ಯಕ್ರಮದ ವೀಕ್ಷಕರ ಪರವಾಗಿ ವಿನಂತಿಸಿಕೊಳ್ಳುತ್ತಿದ್ದೇನೆ.

—ಅರುಣ್, ಮಳವಳ್ಳಿ